

ಬಂದ ಮೇಲೆ ಸೆಣಬಿನಿಂದ ನೇಯುವ ಗೋಣಿಯು ಸದ್ದಿಲ್ಲದೇ ಮರೆಯಾಗಿತ್ತು. ದಿನಪತ್ರಿಕೆಯನ್ನು ದಪ್ಪನಾಗಿ ಹಾಸಿ, ಅದರ ಮೇಲಿಟ್ಟು, ರೆಕ್ಕೆ ಮಡಚಿಕೊಂಡು ಹೆಳವವಾದ ಪಕ್ಷಿಗೊಂದು ನೈಟಿಯನ್ನು ಹೊದಿಸಿ, ಅರಣ್ಯ ಇಲಾಖೆ ಸಿಬ್ಬಂದಿಗೆ ಕಾಯುತ್ತಾ ಕುಳಿತೆವು.

ಪಶ್ಚಿಮಘಟ್ಟಗಳ ದಟ್ಟ ಹಸುರಿನ ಕಾಡುಗಳಲ್ಲಿ ವಾಸಿಸುವ ಬೇಟೆಗಾರ ಹಾವು ಗಿಡುಗ ಬಹಳ ಆಕರ್ಷಕ ಪಕ್ಷಿ. ಗಗನವಾಸಿಯಾದ ಹಾವು ಗಿಡುಗಕ್ಕೆ ಇಂಗ್ಲಿಷಿನಲ್ಲಿ 'ಕ್ರೆಸ್ಟೆಡ್ ಸರ್ಪೆಂಟ್ ಈಗಲ್' ಎನ್ನುತ್ತಾರೆ. ದಟ್ಟವಾದ ಉಷ್ಣವಲಯದ ಹಾಗೂ ದಟ್ಟವಲ್ಲದ ಉಪಉಷ್ಣವಲಯದಲ್ಲೂ ಇವು ಸಾಮಾನ್ಯವಾಗಿ ಕಂಡು ಬರುತ್ತವೆ. ಹಾವು, ಓತಿ, ಉಡದಂತಹ ಬಲಿಪ್ರಾಣಿಗಳು ಹೇರಳವಾಗಿರುವ ಹಾಗೂ ದಟ್ಟ ಹಸುರಿನ ಎತ್ತರದ ಮರಗಳನ್ನು ಇಷ್ಟಪಡುವ ಈ ಪಕ್ಷಿಯು ಅಂತರಿಕ್ಷದ ಅನಭಿಷಕ್ತ ಪ್ರಭೇದವಾಗಿದೆ.

ಎರಡರಿಂದ ಎರಡೂವರೆ ಅಡಿ ಉದ್ದದಷ್ಟು ಬೆಳೆಯುವ ಗಿಡುಗದ ರೆಕ್ಕೆಗಳ ಅಗಲ ಸರಾಸರಿ ಐದು ಅಡಿ. ಗಾಢ ಬೂದು ಬಣ್ಣ ಹೊಂದಿದ ನಮ್ಮಲ್ಲಿನ ಹುಂಜದಷ್ಟೇ ದೊಡ್ಡ ಹಕ್ಕಿ. ಗಜ್ಜುಗದಷ್ಟು ದೊಡ್ಡದಾದ ಮತ್ತು ಹಳದಿ ಬಣ್ಣದ ಕಣ್ಣು, ಬಲು ದೂರದಲ್ಲಿರುವ ಬಲಿಪ್ರಾಣಿಯನ್ನು ಗುರುತಿಸಲು ಸಹಕಾರಿ. ತಲೆಯ ಮೇಲೆ ಬೀಸಣಿಗೆಯಂತಹ ಜುಟ್ಟು ಇದೆ. ಗಾಬರಿಯಾದಾಗ ಆ ಜುಟ್ಟು ಬಿಚ್ಚಿಕೊಳ್ಳುತ್ತದೆ. ಎದೆ, ಹೊಟ್ಟೆ ತಿಳಿಗೆಂಪು. ಬಾಲದಂತಹ ಪುಕ್ಕದಲ್ಲಿ ಬಿಳಿ ಪಟ್ಟಿ ಉಂಟು. ಬಲಿಷ್ಠ ಕೊಕ್ಕು ಮತ್ತು ಕಾಲುಗಳನ್ನು ಬಳಸಿಕೊಂಡು ಹಾವು ಗಿಡುಗ ಬಲಿಪ್ರಾಣಿಯನ್ನು ಸೀಳುತ್ತದೆ. ಹಾವಿನ ತಲೆಯನ್ನು ಒಂದು ಕಾಲಿನಲ್ಲಿ ಮೆಟ್ಟಿಕೊಂಡು, ಕೊಕ್ಕಿನಿಂದ ಹಾವನ್ನು ಸಿಗಿದು ತಿನ್ನುವ ದೃಶ್ಯ ರುದ್ರಭಯಾನಕ. ಮರಗಿಡಗಳಿರುವ ಬಯಲು ನಾಡಿನಲ್ಲೂ ಕಂಡುಬರುತ್ತವೆ. ಹಿಮಾಲಯದ ಸುಮಾರು ಏಳು ಸಾವಿರ ಅಡಿ ಎತ್ತರದಲ್ಲಿ ಇದು ಇರುವುದನ್ನು ಪಕ್ಷಿತಜ್ಞರು ದಾಖಲಿಸಿದ್ದಾರೆ.

ಹಾವುಗಳೇ ಹಾವು ಗಿಡುಗದ ಪ್ರಮುಖ ಆಹಾರವಾದರೂ, ಇತರೆ ಚಿಕ್ಕಪುಟ್ಟ ಸಸ್ತನಿಗಳನ್ನು ಬೇಟೆಯಾಡುತ್ತದೆ. ಅಪರೂಪಕ್ಕೆ ಮೀನು ಮತ್ತು ಇತರ ಚಿಕ್ಕ ಹಕ್ಕಿಗಳನ್ನು ತಿನ್ನುವುದುಂಟು. ಎತ್ತರದ ಕೊಂಬೆಯ ಮೇಲೆ ಬಹಳ ಶಾಂತಿಯಿಂದ ಬಲಿಪ್ರಾಣಿಗಾಗಿ ಹೊಂಚು ಹಾಕಿ ಕುಳಿತಿರುತ್ತದೆ. ನೆಲದಲ್ಲಿ ಚಲನೆ ಕಾಣಿಸಿದ ತಕ್ಷಣದಲ್ಲಿ ಶರವೇಗದಿಂದ ನೆಲಕ್ಕಿಳಿಯುತ್ತದೆ ಮತ್ತು ನಿಖರವಾಗಿ ಬಲಿಪ್ರಾಣಿಯನ್ನು ಹಿಡಿಯುತ್ತದೆ. ಎತ್ತರದ ಮರದ ತುದಿಯಲ್ಲಿ ಚಿಕ್ಕ ರೆಂಬೆ ಹಾಗೂ ಕಡ್ಡಿಗಳನ್ನು ಉಪಯೋಗಿಸಿ ಗೂಡು ಮಾಡುತ್ತವೆ. ಡಿಸೆಂಬರಿನಿಂದ ಮಾರ್ಚ್ ತಿಂಗಳಲ್ಲಿ ಒಂದರಿಂದ ಎರಡು ಮೊಟ್ಟೆಗಳನ್ನಿಟ್ಟು ಮರಿ ಮಾಡುತ್ತವೆ. ತಾಯಿ–ತಂದೆ ಪಕ್ಷಿಗಳು ಮರಿಗಳ ಪಾಲನೆ ಮಾಡುತ್ತವೆ.

ಹಾವು ಗಿಡುಗದ ಬೇಟೆಯ ಕೌಶಲ, ವಿಷದ ಹಾವುಗಳನ್ನು ನಿರ್ಭಯವಾಗಿ ಹಿಡಿದು ಸಿಗಿಯುವ ಪರಿಯನ್ನು ಆಧರಿಸಿ ಹಲವು ಸಂಸ್ಕೃತಿಗಳಲ್ಲಿ ಹಾವು ಗಿಡುಗವನ್ನು ಶಕ್ತಿ–ಸಾಮರ್ಥ್ಯದ ಸಂಕೇತವೆಂದು ಬಣ್ಣಿಸಲಾಗಿದೆ. ವಯಸ್ಕ ಹಾವು ಗಿಡುಗಗಳಿಗೆ ಸಾಮಾನ್ಯವಾಗಿ ಯಾವುದೇ ನೈಸರ್ಗಿಕ ಶತ್ರುಗಳಿಲ್ಲವಾದರೂ, ಅರಣ್ಯದ ಮೇಲಿನ ಮಾನವನ ವಿಪರೀತ ಹಸ್ತಕ್ಷೇಪದಿಂದಾಗಿ, ಅವುಗಳ ಆವಾಸಸ್ಥಾನ ಕ್ಷೀಣಿಸುತ್ತಿದೆ. ಪಕ್ಷಿಪ್ರಪಂಚದಲ್ಲಿ ಮೇರುಬೇಟೆ ಪ್ರಾಣಿಯಾದ ಹಾವು ಗಿಡುಗಗಳು ಇತರೆ ಅನೇಕ ಜಾತಿಯ ಪ್ರಾಣಿಗಳನ್ನು ಭಕ್ಷಣೆ ಮಾಡುವುದರ ಮೂಲಕ ಜೀವಿಗಳ ನೈಸರ್ಗಿಕ ಸಮತೋಲನ ಕಾಪಾಡುವಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ನೆಲಕ್ಕೆ ಪೇಪರ್ ಹಾಸು ಹಾಗೂ ಹೊದೆಯಲು ಹತ್ತಿಯಿಂದ ತಯಾರಾದ ನೈಟಿ ಇದ್ದುದರಿಂದಾಗಿ, ಹಾವು ಗಿಡುಗದ ನಡುಕ ಕೊಂಚ ಕಡಿಮೆಯಾಗಿತ್ತು. ಸರಿಯಾಗಿ ಹತ್ತು ಗಂಟೆಗೆ ಅರಣ್ಯ ಇಲಾಖೆಯ ಜೀಪು ಬಂತು. ಹುಷಾರಿನಿಂದ ಎತ್ತಿ, ಜೀಪಿನ ಡಿಕ್ಕಿಯಲ್ಲಿ ಇಡಲಾಯಿತು.

ಶಿವಮೊಗ್ಗದ ತ್ಯಾವರೆಕೊಪ್ಪದ ಹುಲಿ–ಸಿಂಹಧಾಮದಲ್ಲಿ ಹಾವು ಗಿಡುಗಕ್ಕೆ ನುರಿತ ವೈದ್ಯರ ಚಿಕಿತ್ಸೆ ಮುಂದುವರೆದಿದೆ. ಅದಕ್ಕೆ ಒಗ್ಗಿದ ಮಾಂಸಾಹಾರವನ್ನೇ ನೀಡಲಾಗುತ್ತಿದೆ. ತೀವ್ರ ವಿದ್ಯುತ್ ಆಘಾತಕ್ಕೆ ಸಿಲುಕಿದ ಗಿಡುಗದ ಆರೋಗ್ಯವನ್ನು ಸರಿ ಮಾಡಬೇಕೆಂಬ ಉತ್ಸಾಹದಲ್ಲಿ ಅಲ್ಲಿನ ವೈದ್ಯರು ಶ್ರಮಿಸುತ್ತಿದ್ದಾರೆ. ಹಾವು ಗಿಡುಗ ಮತ್ತೆ ಮೊದಲಿನಂತಾಗಿ ತನ್ನ ನೈಸರ್ಗಿಕ ಸೇವೆಯನ್ನು ನೀಡಲು ಸಫಲವಾಗುತ್ತದೆಯೋ ಅಥವಾ ಚಿಕಿತ್ಸೆಗೆ ಸ್ಪಂದಿಸದೇ ವಿಫಲವಾಗುತ್ತದೆಯೋ ಎನ್ನುವುದನ್ನು ಕಾಲವೇ ನಿರ್ಣಯಿಸಬೇಕು.

**ಪ್ರತಿಕ್ರಿಯಿಸಿ: feedback@sudha.co.in**



ಆಕಾಶದ ಅನಭಿಷಕ್ತನಿಗೆ
ನೆಲಕ್ಕಿಳಿದ ಸಂಕಟ